**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪೊನ್ನಂಪೇಟೆ.**

**ಸಿ.ಸಿ. ನಂ. 88/2025** **ಫ್ರಾ.ಸಾ –1**
**ಚಾ.ಸಾ – 1**

**ದಿನಾಂಕಃ 23.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಶ್ವೇತಾ ಬಿ |
| ಗಂಡನ ಹೆಸರು | : | ದಿಲೀಪ್ ಕುಮಾರ್ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ಅಬಕಾರಿ ನಿರೀಕ್ಷಕರು |
| ವಾಸ ಸ್ಥಳ | : | ಚೆನ್ನಗಿರಿ |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ನಾನು **02.02.2024** ರಿಂದ **06.06.2024** ರ ತನಕ ವಿರಾಜಪೇಟೆ ವಲಯದಲ್ಲಿ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. **22.03.2024** ರಂದು ಸಿಬ್ಬಂದಿಗಳೊಂದಿಗೆ ಲೋಕ ಸಭಾ ಚುನಾವಣೆ ಪ್ರಯುಕ್ತ ಬಿರುನಾಣಿ ಗ್ರಾಮದ ಸುತ್ತಮುತ್ತ ಅಬಕಾರಿ ಗಸ್ತು ನಿರ್ವಹಿಸುತ್ತಿದ್ದಾಗ ಬಂದ ಖಚಿತ ಮಾಹಿತಿ ಏನೆಂದರೆ ಪರಕಟಗೇರಿ ಗ್ರಾಮಕ್ಕೆ ತೆರಳುವ ರಸ್ತೆಯಲ್ಲಿ ಸಾರ್ವಜನಿಕರು ಸಿಕ್ಕಿದ್ದು ಲೈನ್ ಮನೆಗೆ ಹೋಗುವ ವಿಳಾಸ ಕೇಳಲಾಗಿ ಆರೋಪಿ ಮನೆಯ ವಿಳಾಸ ತಿಳಿಸಿರುತ್ತಾರೆ. ಸಾರ್ವಜನಿಕರು ಪಂಚರಾಗಲು ನಿರಾಕರಿಸಿರುತ್ತಾರೆ. ನಂತರ ಸದರಿ ವಿಳಾಸವನ್ನು ಹುಡುಕಿಕೊಂಡು ಹೋಗಲಾಗಿ ಸದರಿ ತೋಟದ ಮಾಲೀಕರು ಹಾಜರಿದು ಸದರಿಯವರ ಹೆಸರು ಕೇಳಲಾಗಿ ಚಾಸಾ 2 ರವರು ಅವರ ಹೆಸರು ವಿಳಾಸ ತಿಳಿಸಿರುತ್ತಾರೆ. ಚಾಸಾ 2 ರವರು ಪಂಚರಾಗಲು ಸಹಕರಿಸಿ ಆರೋಪಿ ಮನೆ ತೋರಿಸಲು ನಮ್ಮನ್ನು ಲೈನ್ ಮನೆ ಹತ್ತಿರ ಕರೆದಕೊಂಡು ಹೋಗಿರುತ್ತಾರೆ.

ಆರೋಪಿತನು ಮನೆಯ ಮುಂಭಾಗದಲ್ಲಿದ್ದು ಆತನ ಹೆಸರು ವಿಳಾಸ ಕೇಳಲಾಗಿ ಅವರು ತಿಳಿಸಿರುತ್ತಾರೆ. ನಮಗೆ ಬಂದ ಮಾಹಿತಿ ತಿಳಿಸಿ ಮನೆಯನ್ನು ಶೋದನೆ ಮಾಡಲು ನ್ಯಾಯಾಲಯದಿಂದ ಶೋದನಾ ವಾರೆಂಟ್ ಪಡೆಯಲು ಕಾಲವಾಕಾಶ ಇಲ್ಲದ ಕಾರಣ ಸ್ಥಳದಲ್ಲಿ ಶೋದನಾ ವಾರೆಂಟ್ ಅನ್ನು ತಯಾರಿಸಿಕೊಂಡು ಪಂಚರ ಸಹಿ ಪಡೆದು ಮನೆಯನ್ನು ಶೋಧಿಸಲಾಗಿ ಮನೆ ಎಡಭಾಗದಲ್ಲಿ ಎರಡು ರೆಟ್ಟಿನ ಪೆಟ್ಟಿಗೆಯನ್ನು ಪಂಚರ ಸಮಕ್ಷಮ ತೆರೆದು ನೋಡಲಾಗಿ Gold winner ರೆಟ್ಟಿನ ಪೆಟ್ಟಿಗೆ 90 M. L. 96 D.K. Double kick whisky tetra packet ಗಳು ಇದ್ದವು. ಮತ್ತೊಂದು I get ರೆಟ್ಟಿನ ಪೆಟ್ಟಿಗೆಯಲ್ಲಿ 15 330 M. L. King fisher lager bear ಹಾಗೂ Breezer jamika passion, 275 M. L. ನ 6 ಬಾಟೆಲ್‌ಗಳು, 275 M. L. ನ Breezer orange flavor10 ಬಾಟೆಲ್‌ಗಳು, 275 M. L. ನ 11 Breezer canberry ಬಾಟೆಲ್‌ಗಳು ದೊರೆತಿದ್ದು ಸದರಿ ಮದ್ಯದ ಬಗ್ಗೆ ಪರವಾನಗಿ ಕೇಳಲಾಗಿ ಇಲ್ಲ ಎಂದು ತಿಳಿಸಿರುತ್ತಾರೆ. ದೊರೆತ D.K. Double kick whisky 30 tetra packet ಗಳನ್ನು, King fisher lager bear 2 ಬಾಟೆಲ್ ಗಳನ್ನು, Breezer jamika passion, Breezer canberry, Breezer orange flavor ತಲಾ ಒಂದು ಬಾಟೆಲ್ ಅನ್ನು ಮಾದರಿಗಾಗಿ FSL ಗೆ ತೆಗೆಯಲಾಯಿತು. ಸೀಲು ಮಾಡಿ ವಶಕ್ಕೆ ಪಡೆಯಲಾಯಿತು. ಬಿಳಿ ಬಟ್ಟೆಯಿಂದ ಸುತ್ತಿ ಸೀಲು ಮಾಡಿ ಪಂಚರ ಸಹಿ ಉಳ್ಳ ಚೀಟಿ ಅಂಟಿಸಲಾಯಿತು. ಸ್ಥಳದಲ್ಲಿ ಆರೋಪಿಗೆ ನೋಟೀಸ್ ನೀಡಿ ಜಾಮೀನಿನ ಮೇಲೆ ಬಿಡುಗಡೆ ಮಾಡಿ ನಂತರ ಕಚೇರಿಗೆ ಬಂದು ಪ್ರ.ವ.ವರದಿ ದಾಖಲಿಸಿರುತ್ತೇನೆ.

ದಿ. 28.05.2025 ರಂದು ಮಾದರಿಯನ್ನು ರಾಸಾಯನಿಕ ಪರೀಕ್ಷೆಗೆ ಚಾಸಾ 4 ರವರ ಮೂಲಕ FSL ಗೆ ಕಳುಹಿಸಲಾಯಿತು. ದಿ. 05.06.2024 ರಂದು ಚಾಸಾ 7 ರವರಿಗೆ ಕಡತವನ್ನು ಹಾಗೂ ಉಳಿದ ಮದ್ಯವನ್ನು ಮುಂದಿನ ತನಿಖೆಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿಯು ಶೋಧನಾ ವಾರೆಂಟ್, ಮಹಜರ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 1 ಮತ್ತು 2 ಎಂದು ಸಹಿಯನ್ನು ನಿ. ಪಿ. 1(ಎ) ಮತ್ತು 2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಹಜರ್ ವೇಳೆ ತೆಗೆದ ಫೋಟೋಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿ. ಪಿ 3 ಎಂದು ಗುರುತಿಸಲಾಯಿತು.

ಸಾಕ್ಷಿಯು ಪ್ರ.ವ.ವರದಿ, FSL ಕಳುಹಿಸಿದ ಮನವಿ, ಕಲಂ 65 ಬಿ ಭಾ ಸಾ ಅದಿನಿಯಮದಡಿಯಲ್ಲಿ ನೀಡಿದ ಪ್ರಮಾಣ ಪತ್ರ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿ. ಪಿ 4 ರಿಂದ 6 ಎಂದು ಸಹಿಗಳನ್ನು ನಿ. ಪಿ. 4(ಎ) ರಿಂದ 6(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು 90 M. L. ನ 30 D.K. Double kick whisky tetra packet ಗಳನ್ನು ಮು. ಮಾ 1 ಎಂದು, King fisher lager bear 2 ಬಾಟೆಲ್ ಗಳನ್ನು ಒಟ್ಟಾಗಿ ಮು. ಮಾ 2 ಎಂದು, Breezer jamika passion 1 ಬಾಟೆಲ್ ಅನ್ನು ಮು ಮಾ 3 ಎಂದು, Breezer orange flavor 1 ಬಾಟೆಲ್ ಅನ್ನು ಮು ಮಾ 4 ಎಂದು, Breezer canberry 1 ಬಾಟೆಲ್ ಅನ್ನು ಮು ಮಾ 5 ಎಂದು, Shakthi Gold ರೆಟ್ಟಿನ ಬಾಕ್ಸ್ ಅನ್ನು ಮು. ಮಾ 6 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ. ಟಿ. ಎಂ. ಎ ವಕೀಲರಿಂದಃ

ನಮ್ಮ ಕಚೇರಿ ವಿರಾಜಪೇಟೆಯಲ್ಲಿದೆ. ಮಾಹಿತಿ ಬಂದಾಗ ಬಿರುನಾಣಿ ಗ್ರಾಮದಲ್ಲಿ ಇದ್ದೆವು. ಅಲ್ಲಿಂದ ಆರೋಪಿ ಮನೆ ಅರ್ಧ ಗಂಟೆ. ಸಾರ್ವಜನಿಕರು ಆರೋಪಿಯ ಮನೆಯ ಬಗ್ಗೆ ವಿವರ ಕೊಟ್ಟಿದ್ದು ಅವರು ಯಾರು ಎಂದು ಗೊತ್ತಿಲ್ಲ. ಆರೋಪಿ ಮಾತ್ರ ಲೈನ್ ಮನೆಯಲ್ಲಿದ್ದು ಬೇರೆ ಯಾರು ಇರಲಿಲ್ಲ. ಲೈನ್ ಮನೆಯಲ್ಲಿ ಆರೋಪಿ ಜೊತೆ ಬೇರೆ ಯಾರು ಇದ್ದಾರೆ ಎಂದು ಹೇಳಲಿಲ್ಲ. ಆರೋಪಿ ಓಡಿ ಹೋಗಲು ಪ್ರಯತ್ನ ಪಡಲಿಲ್ಲ. ಚುನಾವಣಾ ದಿನಾಂಕ ನೆನಪಿಲ್ಲ, ಆದರೆ ನೀತಿ ಸಂಹಿತೆ ಜಾರಿಯಲ್ಲಿತ್ತು. ಆರೋಪಿಗೆ ಅಂಗಡಿ ಇರಲಿಲ್ಲ.

ಚಾಸಾ 2 ರವರು ಲೈನ್ ಮನೆ ಮತ್ತು ತೋಟದ ಮಾಲೀಕರು. ಮದ್ಯ ಮನೆಯಲ್ಲಿ ತಯಾರಿಸಿದ್ದು ಅಥವಾ ಅಂಗಡಿಯಿಂದ ತಂದಿದ್ದು ನನಗೆ ಹೇಳಲು ಬರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಮದ್ಯ ಬಿಟ್ಟು ಉಳಿದ ಮದ್ಯ ಮೇಲಾದಿಕಾರಿಗಳ ಆದೇಶದಂತೆ ಕಚೇರಿಯಲ್ಲಿ ಇಟ್ಟುಕೊಂಡಿದ್ದೇವೆ. ಒಂದೊಂದು Variety ಯ ಮದ್ಯವನ್ನು FSL ಗೆ ತೆಗೆಯಲಾಗಿತ್ತು. ಉಳಿದ ಮದ್ಯದ ಬಾಟೆಲ್‌ಗಳನ್ನು FSL ಗೆ ಕಳುಹಿಸಿರುವುದಿಲ್ಲ ಎಂದರೆ ಸರಿ. ನ್ಯಾಯಾಲಯದಲ್ಲಿ ಒಂದೇ ರೆಟ್ಟಿನ ಬಾಕ್ಸ್ ಇದೆ ಎಂದರೆ ಸರಿ. ನ್ಯಾಯಾಲಯದಲ್ಲಿರುವ Carton ಬಾಕ್ಸ್ ಫೋಟೋದಲ್ಲಿರುವುದಿಲ್ಲ ಎಂದರೆ ಸರಿ. ಆರೋಪಿಯ ಮನೆಯ ಆಚೆ ಶೋದನಾ ವಾರೆಂಟ್ ಅನ್ನು ತಯಾರಿಸಲಾಯಿತು.

ಮಹಜರ್ ನಂತರ FIR ದಾಖಲಾಗಿದೆ. ಶೋದನಾ ವಾರೆಂಟ್‌ನಲ್ಲಿರುವ ವಿಚಾರಗಳನ್ನು ಆರೋಪಿಯೇ ತಿಳಿಸಿರುತ್ತಾನೆ. ಆರೋಪಿಯ ಸ್ವಂತ ಊರು ತಾವಳಗೆರೆ ಟಿ. ಶೆಟ್ಟಿಗೇರಿ ಗ್ರಾಮ. ಪರಕಟಗೇರಿಯ ಲೈನ್ ಮನೆಯಲ್ಲಿ ಕೆಲಸದಲ್ಲಿದ್ದರು. ಆರೋಪಿ

ಕೂಲಿ ಕೆಲಸದವರು. FIR ನಲ್ಲಿ ಆರೋಪಿಯ ತಂದೆ ಹೆಸರು ಭೋಜ ಎಂದು ಶೋದನಾ ವಾರೆಂಟ್ ನಲ್ಲಿ ನಂಜಪ್ಪ ಎಂದು ಇದ್ದು ಅದು ತಪ್ಪಾಗಿ C/o ಎಂದು ಆಗುವ ಬದಲು S/o ಎಂದು ನಮುದಾಗಿದೆ. ಚಾಸಾ 2 ರವರ ತಂದೆಯ ಹೆಸರು ನಂಜಪ್ಪ. ಆರೋಪಿ ಇಬ್ಬರ ಮನೆಯಲ್ಲಿ ಕೆಲಸ ಮಾಡುತ್ತಿದ್ದ. FIR ಹಾಕುವ ಹೊತ್ತಿಗೆ ಆರೋಪಿ ಹೆಸರು ಗೊತ್ತಾಗಿತ್ತು, ಅದಕ್ಕೆ ಬೋಜ ಎಂದು ನಮೂದಿಸಿದ್ದೇವೆ. ಶೋದನಾ ವಾರೆಂಟ್ ನಲ್ಲಿ ಆರೋಪಿ ಹೆಸರು ಇಲ್ಲ ಎಂದರೆ ಸರಿಯಲ್ಲ. ಆದ್ದರಿಂದ FIR ನಲ್ಲಿರುವ ವ್ಯಕ್ತಿ, ಶೋದನಾ ವಾರೆಂಟ್ ನಲ್ಲಿ ವ್ಯಕ್ತಿ ಬೇರೆ ಬೇರೆ ಎಂದರೆ ಸರಿಯಲ್ಲ. ಶೋದನೆ ವೇಳೆ ನಂಜಪ್ಪ ಹಾಜರಿರಲಿಲ್ಲ, ಚಾಸಾ 2 ರವರು ಇದ್ದರು. ಯಾವ ಸರಹದ್ದಿನಿಂದ ಅದನ್ನು ಖರೀದಿಸಲಾಗಿದೆ ಎಂದು ಹೇಳಲಾಗುವುದಿಲ್ಲ, ಭದ್ರತಾ ಚೀಟಿಯನ್ನು ಹಾಳು ಮಾಡಿದ್ದರು. Q. R. Code ಆಧಾರ ಮಹಜರ್ ನಲ್ಲಿ ಮದ್ಯಗಳನ್ನು ನಮೂದಿಸಿಲ್ಲ. ಆರೋಪಿ ಮದ್ಯವನ್ನು ಎಲ್ಲಿಂದ ಖರೀದಿಸಿದರು ಹೇಳಲಿಲಲ್ಲ. ಮು. ಮಾ ನಲ್ಲಿರುವ ಅಂಗಡಿ ಲೈಸೆನ್ಸ್ ಅಂಗಡಿಗಳಲ್ಲಿ ಸಿಗುವಂತದ್ದು ಎಂದರೆ ಸರಿ. ಆರೋಪಿಯ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಲೈನ್ ಮನೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಅಂಕಿ ಅಂಶಗಳಿಗೋಸ್ಕರ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ